## **ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು-ಮಡಿಕೇರಿ**

## **SC No. 41/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | : | **ಶ್ರೀ ಅಂಜಂಡ ಸೂರಜ್** | **PW - 7** |
| ತಂದೆಯ ಹೆಸರು | : | **ಎ.ಎಂ ಅಪ್ಪಾಜಿ** | **CW - 7** |
| ವಯಸ್ಸು | : | **41 ವರ್ಷ** | |
| ವೃತ್ತಿ | : | **ವ್ಯವಸಾಯ** | |
| ವಾಸ | : | **ಕುಂದಚೇರಿ ಗ್ರಾಮ, ಮಡಿಕೇರಿ ತಾಲೂಕು** | |

**ಸಾಕ್ಷಿಯನ್ನು ದಿನಾಂಕ 14-03-2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಮುಖ್ಯವಿಚಾರಣೆ: ಸರ್ಕಾರಿ ಅಭಿಯೋಜಕರಿಂದಃ</u>**

1. ನನಗೆ ಮೃತ ನಂದೀಶ ಮತ್ತು ಆರೋಪಿ ಉತ್ತಪ್ಪ ಇವರ ಪರಿಚಯ ಇರುತ್ತದೆ, ಅವರ ಮನೆ ನಮ್ಮ ಮನೆಯ ಹತ್ತಿರ ಇರುತ್ತದೆ. ನನಗೆ ಪ್ರಾಸಾ-5 ಮತ್ತು ಪ್ರಾಸಾ-6 ಇವರ ಪರಿಚಯ ಇರುತ್ತದೆ. ನಂದೀಶ್ ಈತನು ಹೇಗೆ ಮೃತ ಪಟ್ಟನು ಎಂಬುದು ನನಗೆ ಗೊತ್ತಿಲ್ಲ ಹಾಗೂ ನಾನು ಅದನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ. ನಾನು ಪೊಲೀಸರ ಮುಂದೆ ನಂದೀಶ್ ಈತನು ಹೇಗೆ ಮೃತ ಪಟ್ಟನು ಎಂಬುದರ ಬಗ್ಗೆ ಹೇಳಿಕೆ ಕೊಟ್ಟಿರುವುದಿಲ್ಲ. ನಂದೀಶ್ ಮತ್ತು ಆರೋಪಿ ಮಧ್ಯೆ ಆಸ್ತಿ ವಿವಾದ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಆ ಬಗ್ಗೆ ಹೇಳಿಕೆ ಕೊಟ್ಟಿರುವುದಿಲ್ಲ.

**(ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

**<u>ಪಾಟೀಸವಾಲು- ಸರ್ಕಾರಿ ಅಭಿಯೋಜಕರಿಂದಃ</u>**

1. ಆರೋಪಿ ಮತ್ತು ಮೃತ ನಂದೀಶ್ ಈತನಿಗೆ ಆಸ್ತಿ ವಿಚಾರದಲ್ಲಿ ವೈಮನಸ್ಸು ಇತ್ತು ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 25.11.2023 ರಂದು ರಾತ್ರಿ 8.30 ಗಂಟೆಗೆ ಪೂವಯ್ಯ ನವರ ಮನೆಯ ಮುಂಭಾಗದಲ್ಲಿ

ಜಗಳ ಶಬ್ದ ಕೇಳಿ ನಾನು, ನಾಣಯ್ಯ ಮತ್ತು ಚಂಗಪ್ಪ ಅಲ್ಲಿಗೆ ಹೋದಾಗ ಆರೋಪಿ ಉತ್ತಪ್ಪನು ನೆಲದ ಮೇಲೆ ಕುಳಿತ ನಂದೀಶನನ್ನು ನಿನ್ನನ್ನು ಸಾಯಿಸದೇ ಬಿಡುವುದಿಲ್ಲ ಎಂದು ಅಲ್ಲೇ ಬಿದ್ದ ಕತ್ತಿಯನ್ನು ತೆಗೆದುಕೊಂಡು ಹೋದನು ಮತ್ತು ಕೋವಿಯನ್ನು ಮುರಿದು ನೆಲದ ಮೇಲೆ ಹಾಕಿದ್ದನು ಮತ್ತು ನಂದೀಶನ ತಲೆಯಲ್ಲಿ ಮತ್ತು ಮೈಮೇಲೆ ಗಾಯಗಳು ಆಗಿದ್ದು ಕಂಡುಬಂದು ನಾವು ನಂದೀಶನನ್ನು ಉಪಚರಿಸಿ ರಕ್ತ ಹೋಗದಂತೆ ಗಾಯದ ಮೇಲೆ ಬಿಳಿ ಬಟ್ಟೆ ಸುತ್ತಿ ಕಟ್ಟಿದ್ದೆವು ಎಂದು ಸೂಚಿಸುವುದು ಸರಿಯಲ್ಲ. ನಂತರ ಸೋಮಣ್ಣನವರನ್ನು ವಿಚಾರಿಸಿದಾಗ ಆಸ್ತಿ ವಿಚಾರದಲ್ಲಿ ಆರೋಪಿತನು ನಂದೀಶನ ಜೊತೆ ಜಗಳ ಮಾಡಿ ನಂದೀಶನ ತಲೆಗೆ ಕತ್ತಿಯಿಂದ ಕಡಿದು ಗಾಯ ಪಡಿಸಿದನು ಎಂದು ತಿಳಿಸಿರುತ್ತಾನೆ ಎಂದು ಸೂಚಿಸುವುದು ಸರಿಯಲ್ಲ. ದಿನಾಂಕ 27.11.2023 ರಂದು ಮಧ್ಯಾಹ್ನ 12.51 ಗಂಟೆಗೆ ನಂದೀಶನು ಚಿಕಿತ್ಸೆ ಫಲಕಾರಿ ಆಗದೇ ಮೃತ ಪಟ್ಟನು ಎಂದು ಸೂಚಿಸುವುದು ಸರಿಯಲ್ಲ. ಈ ಬಗ್ಗೆ ನಾನು ಪೊಲೀಸರ ಮುಂದೆ ಈಗ ಓದಿ ಹೇಳಿದಂತೆ "ನಾನು ಈ ಮೇಲಿನ ವಿಳಾಸದಲ್ಲಿ .................... ಆರೋಪಿ ಉತ್ತಪ್ಪನನ್ನು ಮುಂದೆ ನೋಡಿದರೆ ಗುರುತಿಸುತ್ತೇನೆ" ಎಂದು ಹೇಳಿಕೆ ಕೊಟ್ಟಿರುವುದಿಲ್ಲ. ಸದರಿ ಹೇಳಿಕೆಯನ್ನು **ನಿಪಿ-17** ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು- ಆರೋಪಿ ಪರ ವಕೀಲರಾದ ಶ್ರೀ. ಓ.ಎಸ್.ಸಿ ರವರಿಂದಃ**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರಿಂದ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ.